Regd No B G. 155

Sri

23—10—1964

48 th Year
ನೇ ವರ್ಷ
★
Sri 'Satyavadi'
— DAILY —
MYSORE 4

ಸತ್ಯವಾದಿ

ಸ್ಥಾಪಕರು— ಅಂಮನೆ ಸಿಂಸ್ಥೆದಾರ್ ಎಂ ಪಿ ಸುಬ್ಬರಾಯರು | 2 ನಪೈ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನಪೈ

Protect the Cow
ಗೋಸಂರಕ್ಷಣೆ ಮಾಡಿ

ದೆಹಲಿಯಲ್ಲಿ ಭಾರತ-ಸಿಂಹಳ ಪ್ರಧಾನಿಗಳ ಮಾತುಕತೆ

ನಾಳೆಯಿಂದ ಸಿಂಹಳ ಭಾರತೀಯ ಜನರ ಬಗ್ಗೆ ಭಾರತದ ಪ್ರಧಾನಿ ಶ್ರೀ ಲಾಲ ಬಹಾದ್ದೂರ ಶಾಸ್ತ್ರಿ ಮತ್ತು ಸಿಂಹಳದ ಪ್ರಧಾನಿ ಶ್ರೀಮತಿ ಬಂಡಾರ ನಾಯಕೆಯವರು ಚರ್ಚೆ ಆರಂಭಿಸುವರು

ಸ|| ಸ್ವರ್ಣಸಿಂಗರು, ಸಿಂಹಳದಲ್ಲಿರುವ ಭಾರತದ ಹೈ ಕಮಿಷನರು, ಮುದರಾಸಿನ ಮಂತ್ರಿ ಶ್ರೀ ರಾಮಯ್ಯ ಮುಂತಾದವರು ಚರ್ಚೆಯಲ್ಲಿ ಭಾಗವಹಿಸುವರು,

★

ಬಂಡಾರನಾಯ್ಕೆರವರಿಗೆ ಅಭೂತಪೂರ್ವ ಸ್ವಾಗತ

ಸಿಂಹಳದ ಪ್ರಧಾನಿ ಶ್ರೀಮತಿ ಬಂಡಾರನಾಯ್ಕೆಯವರು ಆರು ದಿವಸಗಳ ಪ್ರವಾಸ ಉದ್ದೇಶದಿಂದ ನಿನ್ನೆ ದೆಹಲಿಗೆ ಆಗಮಿಸಿದರು. ಪಾಲಂ ವಿಮಾನ ನಿಲ್ದಾಣದಲ್ಲಿ ಅವರನ್ನು ಪ್ರಧಾನಿ ಶ್ರೀ ಲಾಲ ಬಹಾದ್ದೂರ ಶಾಸ್ತ್ರಿಯವರು, ಮಂತ್ರಿಗಳು, ಮಿತ್ರತರರು ಸುಸ್ವಾಗತಿಸಿದರು ಅವರಿಗೆ ಗೌರವ ರಕ್ಷೆ ಕೊಡಲಾಯಿತು.

ರಾಷ್ಟ್ರಪತಿ ಭವನಕ್ಕೆ ಪ್ರಧಾನಿ ಶಾಸ್ತ್ರಿಯವರೊಡನೆ ಅವರು ಕಾರಿನಲ್ಲಿ ತೆರಳಿದಾಗ ರಸ್ತೆಯ ಎಂಡುಕಡೆಯಲ್ಲೂ ಜನರು ನಿಂತಿದ್ದರು ಭಾರತ ಹಾಗೂ ಸಿಂಹಳ ಧ್ವಜಗಳನ್ನು ಹಾರಿಸಲಾಗಿತ್ತು.

ಶ್ರೀಮತಿ ಬಂಡಾರ ನಾಯಕೆಯವರು ರಾಜಘಾಟಿನಲ್ಲಿ ಗಾಂಧೀಜಿ ಸಮಾಧಿಗೆ ಮತ್ತು ಶಾಂತಿವನದಲ್ಲಿ ನೆಹರು ಸಮಾಧಿಗೆ ಪುಷ್ಪಾರ್ಚನೆ ಅರ್ಪಿಸಿದರು

ಪ್ರಧಾನಿ ಬಂಡಾರನಾಯಕೆಯವರು ರಾಷ್ಟ್ರಪತಿ ಡಾ|| ರಾಧಾಕೃಷ್ಣರನ್ನು ಭೇಟಿಮಾಡಿದ್ದರು.

ವಿವಿಧ ವಿಷಯಗಳು

ಬೆಂಗಳೂರಿನಲ್ಲಿ 3 ದಿನಗಳ ಹಿಂದೆ ಕಳವಾಗಿದ್ದ ಲಾರಿಯೊಂದು ತಿಪಟೂರಿನಲ್ಲಿ ಕಳುವಾಯಿತೆಂದು ವರದಿ ಆಗಿದೆ.

★

ಅಲಪ್ಪಿಯಿಂದ ಬಂದಿರುವ ವಾರ್ತೆ ಪ್ರಕಾರ ಕೇರಳ ಚುನಾವಣೆಯಲ್ಲಿ ಕಾಂಗ್ರೆಸನ್ನು ಸೋಲಿಸಲು ವಿರೋಧಪಕ್ಷಗಳು ಸಂಘಟಿತವಾಗಿ ಸಂಯುಕ್ತರಂಗ ರಚಿಸಲು ನಿರ್ಧರಿಸಿವೆ.

★

ಇಂಗ್ಲೀಷಿನಲ್ಲಿ ಗಂಟೆ ತಿಳಿಸುವ ಮಾತನಾಡುವ ಗಡಿಯಾರವು ಮದ್ರಾಸು ಟೆಲಿಫೋನ್ ಎಕ್ಸ್‌ಚೇಂಜಿನಿಂದ ಗಂಟೆ ಹೇಳುವದು.

★

ಲೈಸನ್ಸು, ಪರ್ಮಿಟ್ಟು, ಕೋಟಾಗಳ ವಿತರಣೆ ಕುರಿತು ಸಲಹೆ ನೀಡಲು ಬ್ರಿಟಿಷ್ ನ್ಯಾಷನಲ್ ಮಂತ್ರಿ ಒಂದು ಮಂಡಲಿಯನ್ನು ಸ್ಥಾಪಿಸುವ ಯೋಜನೆಯನ್ನು ಭಾರತ ಸರ್ಕಾರ ಅನುಮೋದಿಸಿದೆ.

★

ಪಾಕಿಸ್ತಾನದ ಮಾಜಿ ಗವರ್ನರು ಜನರಲ್ಲಾದ ಶ್ರೀಮತಿ ಜಿನ್ನಾ ನಾಜೆಮುದ್ದೀನು ನಿಧನರಾದರೆಂದು ವರದಿ ಆಗಿದೆ.

★

ಚೀನಾ ಅಣು ಬಾಂಬು ಸ್ಫೋಟದ ಬಗ್ಗೆ ದೈನಿಕ ನೇಪಾಳ ಪತ್ರಿಕೆ, ಇದು ಕೈರೋ ಸಮ್ಮೇಳನಕ್ಕೆ ಸವಾಲಿನಂತಿದೆ ಎಂದಿದೆ.

★

ನಾಳೆಯ ಪಂಚಾಂಗ

ದೈವಜ್ಞಶಿಖಾಮಣಿ
ಅಸ್ಥಾನ ಮಹಾವಿದ್ವಾ. ಧರ್ಮಾಧಿಕಾರಿ
ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವಸ್ಮಣಿ
ಸಂಪಶ್ಚಿಷ್ಣು ಜೋಯಿಸರವರಿಂದ

24 ಶನಿವಾರ ಚೌತಿ ರೋಹಿಣಿ

ಬತ್ತ ಸಾಗಾಣಿಕೆ

ವಿದೇಶಿಯ ರಾಷ್ಟ್ರದ ಅಭಾವ ಪ್ರದೇಶಗಳ ಹುಂಚಿಕೆಗೆ ದಿನ ಪ್ರಾವಶ್ಯ ಸಹಸ್ರ ಚೀಲ ಬತ್ತ ಕಳಿಸಲಾಗುತ್ತಿದೆ

ಸಂದರ್ಶನ

ಭಾರತದ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ಪ್ಯಾರಿಸ್ಸಿನಿಂದ ಲಂಡನ್ನಿಗೆ ತೆರಳಿ ಪ್ರಧಾನಿ ಹೆರಾಲ್ಡ್ ವಿಲ್ಸನ್ ರನ್ನು ಭೇಟಿ ಮಾಡುವರೆಂದು ತಿಳಿಯಬಂದಿದೆ

ವಿಧಾನ ಸಭೆಯಲ್ಲಿ

ಮದರಾಸು ಸರ್ಕಾರದ ಮೇಲೆ ಅವಿಶ್ವಾಸ ನಿರ್ಣಯ ಚರ್ಚೆ ನಿನ್ನೆಯಿಂದ ಆರಂಭವಾಯಿತು. ಮೂರು ದಿನಗಳ ವರಗೆ ಈ ಚರ್ಚೆ ನಡೆಯುವದು ಸರಿಕಾದ ಆಹಾರ ನೀತಿಯನ್ನು ಟೀಕಿಸಲಾಯಿತು.

★

ರಾಜಾಸ್ಥಾನದ ಶ್ರೀ ಸುಖಾಡಿಯಾ ಮಂತ್ರಿಮಂಡಲದ ಮೇಲೆ ಅವಿಶ್ವಾಸ ನಿರ್ಣಯ ಚರ್ಚೆ ಆಗಲು ವಿಧಾನ ಸಭೆ ಒಪ್ಪಿತು.

ಮನವಿ

ತಿರುಪತಿ ಪೌರಸಭೆಗೆ ಅಲ್ಲಿನ ದೇವಾಲಯದಿಂದ ವರ್ಷಕ್ಕೆ ಎಂಡು ಲಕ್ಷ ರೂ ಪಾಯಿಗಳನ್ನು ಕೊಡುವಂತೆ ಆಂಧ್ರ ಸರಕಾರ ವಿನಂತಿಸಿದೆ.

ಕಷ್ಟ ಪರಿಸ್ಥಿತಿ

ತಿರುಪತಿಯಲ್ಲಿ ಜನರಿಗೆ ಅಕ್ಕಿ ರಾಗಿ ಪರಿಸ್ಥಿತಿ ಕಷ್ಟಕರವಾಗಿದೆ

—

ಕಾಶ್ಮೀರದ 5 ಮಂದಿ ಹೊಸ ಮಂತ್ರಿಗಳು ನಿನ್ನೆ ಪ್ರಮಾಣ ಮಾಡಿದರು

ತಾಜಾ ಸಮಾಚಾರ

ಗಾಂಗಟಾಕ್— ಟಿಬೆಟ್ಟಿನ ನೈರುತ್ಯ ಭಾಗದಲ್ಲಿ ರೇಡಿಯೊಆಕ್ಟಿವ್ ಮಿನರಲ್ ಹೇರಳವಾಗಿ ಸಿಕ್ಕುವುದೆಂದು ಚೀನೀ ಭೂಗರ್ಭಶೋಧಕರು ಹೇಳಿರುವುದಾಗಿ ಪ್ರಕಟವಾಗಿದೆ

★

ಸ್ಟಾಫರ್ಡ್ ಆನ್ ಎವನ್— ಷೇಕ್ಸಪಿಯರ್ ಮಹಾಕವಿಯ 400 ನೇ ವರ್ಷಾರ್ಷಿಕೋತ್ಸವದಂದು, ಅಲ್ಲಿಯ 2 ಲಕ್ಷ ಪೌಂಡು ಷೇಕ್ಸಪಿಯರ್ ಕೇಂದ್ರಕ್ಕೆ ಭಾರತದಲ್ಲಿನ ಕಲ್ಕತ್ತಾ ಕಲಾ ಸಂಘದ ಪ್ರತಿನಿಧಿಗಳು ದುರ್ಗದ ಕೆತ್ತನೆ ಕೆಲಸದ ಒಂದು ತಟ್ಟೆಯನ್ನು ಪಾರಿತೋಷಕವಾಗಿತ್ತಿರುವರು ; ಅದರಲ್ಲಿ ಗುರುದೇವ ರವೀಂದ್ರನಾಥರ ಪದ್ಯವೊಂದು ಕಾಣಿಸಲಾಗಿದೆ

★

ನವದೆಹಲಿ— ವಾಣಿಜ್ಯ ವಾಹನಗಳು ಮತ್ತು ಜೀಪಿನ ಮೇಲಿನ ಬೆಲೆ-ಹೆತೋಟಿಯನ್ನು ತೆಗೆಯಬೇಕೆಂದು ಮೋಟಾರು ವೈಗಾರಿಕೆಯವರ ಕೋರಿಕೆಯಾಗಿದೆ

★

ಲಂಡನ್— ಕಾಮನ್ವೆಲ್ತ್ ಪರ್ಯಾಲೋಚನ ಸಮಿತಿಯನ್ನು ಸಕ್ರಿಯಗೊಳಿಸುವ ಬಗ್ಗೆ ಕಾಮನ್ವೆಲ್ತ್ ಸಂಪರ್ಕಾಂಗಗಳನ್ನು ಕೇಳುವ ನಿರೀಕ್ಷೆಯಿದೆ

★

ನವದೆಹಲಿ— ವ್ಯವಸಾಯ ವಿಭಾಗದ ಕಾರ್ಯಗಳು ನಿರೀಕ್ಷಿಸಲಾಗಿದ್ದಕ್ಕಿಂತ ಅತಿ ಕಡಮೆಯಾಗಿರುವದೆಂದು ಯೋಜನಾ ಕಮಿಷನ್ನು ಹೇಳಿದೆ

★

ನವದೆಹಲಿ— ನವೆಂಬರು 1 ರಿಂದ 15 ರವರೆಗೆ ಐತಿಹಾಸಿಕ ಸ್ಮಾರಕಗಳಿಗೆ ಪ್ರಾಬಂಧಪಟ್ಟಂತೆ ಆಂತರಾಷ್ಟ್ರೀಯ ಚಳವಳಿಯೊಂದನ್ನು ಆಚರಿಸಲಾಗುವುದು

ಹಿಂದಿನ ಕಾಲದಲ್ಲಿನ

ಶಿಕ್ಷೆ ಹೀಗಿತ್ತಂತೆ

ಹಿಂದಿನ ಕಾಲದಲ್ಲಿ ಕಾನೂನನ್ನು ಮುರಿದವರಿಗೆ ಉಗ್ರ ತರವಾದ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು ; ಇತಿಹಾಸಾವಲೋಕನದಿಂದ ಈ ವಿಚಾರವು ತಿಳಿಯುವುದು : ಚಾಂದ್ರಗುಪ್ತ ವೈರ್ಯನ ಕಾಲದಲ್ಲಿ ಸಣ್ಣ ತಪ್ಪಿಗೂ ಸಹ ಉಗ್ರವಾದ ಶಿಕ್ಷೆಯನ್ನು ವಿಧಿಸುತ್ತಿದ್ದರು ; ರಸ್ತೆಗಳಲ್ಲಿ ಗಲೀಜು ಎಸೆದರೆ ಸಹ ಥಳಿಸುವುದು, ಅವಯವಗಳನ್ನು ತೆರೆದುಹಾಕುವುದು ಮುಂತಾದ ಶಿಕ್ಷೆಗಳನ್ನು ವಿಧಿಸಲಾಗುತ್ತಿತ್ತು : ಒಬ್ಬ ಚಕ್ರವರ್ತಿಯ ಕಾಲದಲ್ಲಿ ಶಿಕ್ಷೆಗಳ ತೀವ್ರತೆ ಸ್ವಲ್ಪ ಕಡಮೆಯಾಯಿತು : ಆಗ ವರ್ಷಕ್ಕೆ ಒಂದು ಬಾರಿ ಖೈದಿಗಳನ್ನು ಬಿಡುಗಡೆ ಮಾಡಲಾಗುತ್ತಿತ್ತು : ಸಂತರ ದಂಡನೆ ಶಿಕ್ಷೆ ಜಾರಿಯಾಗಿತ್ತು ; ಶ್ರೀ ಹರ್ಷ ವರ್ಧನನ ಕಾಲದಲ್ಲಿ ಅಂಗವಿಚ್ಛೇದನೆ ಮತ್ತು ಉಪವಾಸ ಶಿಕ್ಷೆ ಕೊಟ್ಟು ಸಾಯಿಸುವುದು ಮೊದಲಾದ ಅನಾಗರೀಕ ಪದ್ಧತಿಗಳು ಜಾರಿಯಲ್ಲಿದ್ದವು : ವಿಜಯನಗರದ ಶ್ರೀ ಕೃಷ್ಣದೇವರಾಯನ ಕಾಲದಲ್ಲಿ ಕಳ್ಳರು ಮತ್ತು ದರೋಡೆಕೋರರುಗಳ ಕೈಕಾಲುಗಳನ್ನು ಕತ್ತರಿಸಿ ಹಾಕುತ್ತಿದ್ದರು : ಅಶ್ರಿತರುಗಳ ಕೈಕಾಲುಗಳನ್ನು ಕತ್ತರಿಸಿ ಹಾಕುತ್ತಿದ್ದರು ; ಅಶ್ರಿತರು ದಂಗೆ ಎದ್ದರೆ ಅವರುಗಳನ್ನು ಅನೆಕಾಲಿನಲ್ಲಿ ತುಳಿಸುತ್ತಿದ್ದರು : ಇನ್ನೂ ಅನೇಕ ಅನಾಗರೀಕ ಪದ್ಧತಿಗಳಿಂದ ಅವರನ್ನು ಗಲ್ಲಿಗೇರಿಸುತ್ತಿದ್ದರು : ಅಕ್ಬರ್ ಚಕ್ರವರ್ತಿಯ ಕಾಲದಲ್ಲಿ ಕೊಲೆ, ದರೋಡೆ, ದಂಗೆ ಮುಂತಾದ ಅಪರಾಧಗಳಿಗೆ ಮರಣದಂಡನೆ ವಿಧಿಸುತ್ತಿದ್ದರು : ಕಣ್ಣು ಕೀಳಿಸುವುದು, ಅಂಗವಿಚ್ಛೇದನ, ಮುಂತಾದ ಉಗ್ರ ಶಿಕ್ಷೆಗಳನ್ನು ಇತರೇ ಅಪರಾಧಗಳಿಗೂ ಸಹ ವಿಧಿಸಲಾಗುತ್ತಿತ್ತು ; ಸರ್ಕಾರಕ್ಕೆ ದ್ರೋಹವೆಸಗಿದವರಿಗೆ ಛಡಿ ಏಟಿನ ಶಿಕ್ಷೆ ಮತ್ತು ಕಾರಾಗೃಹ ವಾಸವನ್ನು ವಿಧಿಸಲಾಗುತ್ತಿತ್ತು : ಶಿವಾಜಿಯ ಕಾಲದಲ್ಲಿ ಅವನ ಆಜ್ಞೆ ಎಂದ್ದವಾಗಿ ನಡೆದವರಿಗೆ ಮರಣದಂಡನೆ ವಿಧಿಸುತ್ತಿದ್ದರು.

ದಸರಾ ಮನರಂಜನೆ, ಸಾಂಸ್ಕೃತಿಕ ಕಾರ್ಯಕ್ರಮ- ಎಗ್ಸಿಬಿಷನ್ನಿನಲ್ಲಿ

ತಾ|| 24 ರಂದು ಸಂಜೆ 6 ರಿಂದ ನಾಗಸ್ವರ, ನಾಟಕ

ಗೋರಕ್ಷಣೆ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ



ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ.

ಸಹಾಯಕರ ಹೆಸರನ್ನು ಪತ್ರಿಕೆಯಲ್ಲಿ ಕೃತಜ್ಞತಾಪೂರ್ವಕ ಪ್ರಕಟಿಸಲಾಗುತ್ತೆ.

ರೂ. 10 ಕ್ಕೆ ಮೇಲ್ಪಟ್ಟು ಕೊಟ್ಟವರಿಗೆ 'ಗೋರಕ್ಷಣ' ಕಳುಹಿಸಲಾಗುತ್ತಿರುವುದು

ವಿಳಾಸ- ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

ವುಡ್‌ಲ್ಯಾಂಡ್ಸ್ 23-10-64 ರಿಂದ

ಅಮೋಘ ಆರಂಭ

ವಿಶಿಷ್ಟ

ವಿಭಿನ್ನ ವಿಷಯ ಸಾಮರ್ಥ್ಯ ಜಾಣವಾಕ್ಯ, ನಿರೂಪಣಾಸು

ಅಧಿನಯಿಸಿರುವ ಸುಂದರ ಹಿಂದೀ ಚಿತ್ರ

ಕೌನ್ ಆಪ್ಪ ಕೌನ್ ಪರಾಯ

ಸಂಗೀತ- ರವಿ [ದಿನವಹಿ 3 ಪ್ರದರ್ಶನಗಳು]

ಆಪೆರಾ— ಜನಪ್ರಿಯ 3 ನೇ ವಾರ

ಸುಂದರ ತಮಿಳು ಚಿತ್ರ [ದಿನ 3 ಆಟಗಳು]

ವೀರಾಂಗನೆ

ಪಾತ್ರ- ಜೆಮಿನಿ ಗಣೇಶ್, ಪದ್ಮಿನಿ, ರಾಗಿಣಿ, ಬಾಲಾಜಿ, ಸುಕುಮಾರಿ, ಅಶೋಕ್

ರಣಜಿತ್‌ನಲ್ಲಿ— ಯಶಸ್ವಿ 4 ನೇ ವಾರ

— ಮನರಂಜಕ, ಬೋಧಪ್ರದ, ಆಕರ್ಷಣೀಯ ಕೌಟುಂಬಿಕ ಕನ್ನಡ ಚಿತ್ರ —

ಸಕಲರೂ ನೋಡಿ ಆನಂದಿಸಬೇಕಾದ ಅಪೂರ್ವ ಕಲಾಕೃತಿ

ಮುರಿಯದ ಮನೆ [ಕನ್ನಡ]

ರಾಜಕುಮಾರ್, ಉದಯಕುಮಾರ್, ಅಶ್ವತ್ಥ್, ಬಾಲಕೃಷ್ಣ, ನರಸಿಂಹರಾಜು ಪಂಢರೀಬಾಯಿ, ಜಯಂತಿ ಮುಂತಾದವರು ಪಾತ್ರಧಾರಿಗಳು

ನಿರ್ದೇಶನ : ವೈ. ಆರ್. ಸ್ವಾಮಿ, ಎಂ. ಎ.

4 ವಾರಗಳು ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ರದ್ದು ಮಾಡಿದೆ

ಪ್ರತಿ ದಿನ 3 ಆಟಗಳು — ಕರ್ನಾಟಕ ಫಿಲ್ಮ್ಸ್ ಹಂಚಿಕೆ

SHAKTI SUDHA

Superb Tonic

Help The ' Gorakshana'

" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ

ವಾರ್ಷಿಕ ಚಂದಾ 50 ನ ಪೈ

' ಗೋರಕ್ಷಣ ' ಕ್ಕೆ ಸಹಾಯದ್ರವ್ಯವನ್ನೂ, ಲೇಖನಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

Edited, Printed & Published by the Proprietor 'Dharma Prachara Nirata' M. S. Krishna Rao at the Satyavadi Press, Chamarajapuram, Mysore 4